ವಿಶ್ವ ಸುದ್ದಿಪತ್ರಿಕೆ

ಟೋನಿ ಅಲಾಮೊ ಕ್ರೈಸ್ತ ಮಿನಿಸ್ಟ್ರಿಗಳು






ಹೊಸ ಜೆರೂಸಲೆಮ್ ವಿಶ್ವಾದ್ಯಂತದ ಚರ್ಚುಗಳು

ಧರ್ಮಗುರು ಟೋನಿ ಅಲಾಮೊ | ಅಲಾಮೊ ಕ್ರೈಸ್ತ ರಾಷ್ಟ್ರ | ಸಂಪುಟ 17700


# ದಿವ್ಯ ದೇವದೂತರು ನಮ್ಮ ಗ್ರಹದ ಮೇಲೆ ಸುತ್ತುತ್ತಿದ್ದಾರೆ

**ಟೋನಿ ಅಲಾಮೊ ಅವರಿಂದ**

“ದೇವರಿಗೆ ಇಪ್ಪತ್ತು ಸಾವಿರ ರಥಗಳಿವೆ, ಮತ್ತು ಸಹಸ್ರಾರು ದೇವದೂತರುಗಳಿದ್ದಾರೆ ಮತ್ತು ಕರ್ತರು ಅವರಲ್ಲಿದ್ದಾರೆ” (ಕೀರ್ತನೆಗಳು 68:17). ದೇವರ ರಥಗಳು ಎಂದರೆ ಇಂದು ಯುಎಫ್‌ಒ ಎಂದು ಕರೆಯಲ್ಪಡುವ ಹಾರುವ ತಟ್ಟೆಗಳು ಎಂಬುದು ಬಹಳ ಸ್ಪಷ್ಟವಾಗಿದೆ. ಅವು ಬೇರೆ ಯಾವುದೋ ಗ್ರಹದಿಂದ ಬಂದವುಗಳಲ್ಲ, ಬದಲಿಗೆ ದೇವರ ದೂತರಾಗಿದ್ದಾರೆ. ಅವರು ದೇವರ ಕಾನೂನಿನ ವಿರುದ್ಧದ ಮತ್ತು ರಕ್ಷಣೆಯ ಉತ್ತರಾಧಿಕಾರಿಗಳ ವಿರುದ್ಧದ ಅಪರಾಧಗಳಿಗಾಗಿ ಹಲವಾರು ಶತಮಾನಗಳಿಂದ ಭೂಮಿಯನ್ನು ಗಮನಿಸುತ್ತಿದ್ದಾರೆ.[1]



*1970ರ ದಶಕದಲ್ಲಿ ಮತ್ತು 80 ರ ದಶಕದ ಆರಂಭದಲ್ಲಿ ಟೋನಿ ಮತ್ತು ಸೂಸನ್ ಅಲಾಮೊ ಅವರ ದೂರದರ್ಶನ ಕಾರ್ಯಕ್ರಮದಲ್ಲಿ ಆರ್ಕೆಸ್ಟ್ರಾ ಮತ್ತು ಕಾಯರ್*

ಇಬ್ರಿಯರಿಗೆ 1:10-14 ಹೀಗೆಂದು ಹೇಳುತ್ತದೆ, “ಕರ್ತನೇ, ಆದಿಯಲ್ಲಿ ನೀನು ಭೂಮಿಗೆ ಅಸ್ತಿವಾರವನ್ನು ಹಾಕಿದಿ, ಗಗನಮಂಡಲವು ನಿನ್ನ ಕೈಕೆಲಸವಾಗಿದೆ; ಅವು ನಾಶವಾಗುವವು, ಆದರೆ ನೀನು ಶಾಶ್ವತವಾಗಿರುತ್ತೀ; ಅವೆಲ್ಲವೂ ವಸ್ತ್ರದಂತೆ ಹಳೆಯದಾಗುವವು, ಅವುಗಳನ್ನು ಮೇಲಂಗಿಯಂತೆಯೂ ವಸ್ತ್ರದಂತೆಯೂ ಮಡಚುತ್ತೀ, ಮತ್ತು ಅವು ಮಾರ್ಪಡುವವು; ನೀನಾದರೋ ಏಕರೀತಿಯಾಗಿದ್ದೀ. ನಿನ್ನ ವರುಷಗಳು ಮುಗಿದುಹೋಗುವದಿಲ್ಲ ಎಂತಲೂ ಹೇಳುತ್ತಾನೆ. ಆದರೆ ದೇವದೂತರಲ್ಲಿ ಯಾವನ ವಿಷಯದಲ್ಲಿಯಾದರೂ - ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗಿ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು [ಆತ ಅದನ್ನು ಕೇವಲ ಕ್ರಿಸ್ತರಿಗೆ ಹೇಳಿದಂತೆ] ಎಂಬುದಾಗಿ ಎಂದಾದರೂ ಹೇಳಿದ್ದಾನೋ? ಇವರೆಲ್ಲರೂ ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಸುವಾರ್ತಾಸೇವೆಯ ಆತ್ಮಗಳಲ್ಲವೋ?”[ಇಂಗ್ಲಿಷಿನ ಕೆಜೆವಿ ಬೈಬಲ್ ನಿಂದ]

ದೇವರ ರಥಗಳು (ಹೆಚ್ಚಿನ ಜನರು ಯುಎಫ್‌ಒ ಎಂದು ಕರೆಯುತ್ತಾರೆ) ಇಲ್ಲದೆ ಹೋಗಿದ್ದರೆ, ದೇವರ ಸುವಾರ್ತಾ ಸೇವೆಯ ಆತ್ಮಗಳು ಪ್ರತಿ ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾಲ ಎಲ್ಲಾ ಸಂತರ ಒಳ್ಳೆಯ ಕೆಲಸಗಳ ಮತ್ತು ದುಷ್ಟರು ಭೂಮಿಯ ಮೇಲೆ ನಡೆಸುವ ಭ್ರಷ್ಟಾಚಾರದ ಮೇಲೆ ನಿಗಾ ಇಡುವುದು ಹೇಗೆ? ಸಂತರನ್ನು ಹರಸಲು ಅಥವಾ ದುಷ್ಟರಿಗೆ ಎಚ್ಚರಿಕೆ ನೀಡಲು, ಶಪಿಸಲು ಅಥವಾ ನಾಶ ಮಾಡಲು ಯಾವ ದೇವದೂತರನ್ನು ಯಾವಾಗ ಕಳುಹಿಸಬೇಕೆಂದು ದೇವರಿಗೆ, ಸರ್ವಾಂತರ್ಯಾಮಿ ದೇವರಿಗೆ ಹೇಗೆ ತಿಳಿಯುತ್ತದೆ?

ಉದಾಹರಣೆಗೆ, ಆದಿಕಾಂಡ 32:12ರಲ್ಲಿ ದೇವರು, ಆತ ನಂತರ ಇಸ್ರಾಯೇಲ್ ಎಂದು ಕರೆದ ಯಾಕೋಬನಿಗೆ ಹೀಗೆಂದು ಹೇಳಿದರು, “ನಿನಗೆ ಒಳ್ಳೇದನ್ನು ಮಾಡಿ ನಿನ್ನ ಸಂತತಿಯನ್ನು ಸಮುದ್ರದ ಮರಳಿನಂತೆ ಅಸಂಖ್ಯವಾಗಿ ಅಭಿವೃದ್ಧಿ ಮಾಡುವೆನೆಂದು...”. ಇಸ್ರಾಯೇಲನ ಎಲ್ಲಾ ಮಕ್ಕಳನ್ನು ಲೆಕ್ಕ ಮಾಡಲು ಅರಸನಾದ ದಾವೀದನು ನಿರ್ಧರಿಸಿದಾಗ, ಆತನ ಮನಸ್ಸಿನಲ್ಲಿ ಏನಿತ್ತು ಎಂಬುದು ದೇವರಿಗೆ ತಿಳಿದಿತ್ತು. ಅದು ಪ್ರಾರಂಭವಾದದ್ದು ಹೀಗೆ. ಪೂರ್ವಕಾಲವೃತ್ತಾಂತ ಮೊದಲ ಭಾಗ 21:1-2 ಹೀಗೆಂದು ಹೇಳುತ್ತದೆ, “ಸೈತಾನನು ಇಸ್ರಾಯೇಲ್ಯರಿಗೆ ವಿರೋಧವಾಗಿ ಎದ್ದು ಲೆಕ್ಕಹಾಕುವುದಕ್ಕೆ [ಲೆಕ್ಕ ಮಾಡಲು ಸಾಧ್ಯವಿಲ್ಲ ಏಕೆಂದರೆ ಅವರು ಅಸಂಖ್ಯರು ಎಂದು ದೇವರು ಹೇಳಿದ್ದರು (ಇಬ್ರಿಯರಿಗೆ 11:12)] ದಾವೀದನನ್ನು ಪ್ರೇರಿಸಿದನು. ದಾವೀದನು ಯೋವಾಬನನ್ನೂ ಜನಾಧಿಪತಿಗಳನ್ನೂ [ನಾಯಕರು] ಕರೆದು - ನನಗೆ ಜನರ ಲೆಕ್ಕ ಗೊತ್ತಾಗುವ ಹಾಗೆ ಬೇರ್ಷೆಬದಿಂದ ದಾನ್ ಊರಿನ ವರೆಗೂ ಸಂಚರಿಸಿ ಇಸ್ರಾಯೇಲ್ಯರನ್ನು ಲೆಕ್ಕಮಾಡಿಕೊಂಡು ಬನ್ನಿರಿ ಎಂದು ಆಜ್ಞಾಪಿಸಿದನು.” ಸೈತಾನನಿಗೆ ವಿಧೇಯನಾಗುವ ಮೂಲಕ, ಹವ್ವಳ ಹೃದಯ ಆಲೋಚಿಸಿದಂತೆಯೇ, ರಾಜನಾದ ದಾವೀದನ ಹೃದಯವೂ, “ನಾನು ಪರಾತ್ಪರನಾದ ದೇವರಂತೆ ಆಗುವೆನು, ಮತ್ತು ದೇವರಿಗೆ ಸಂಖ್ಯೆ ತಿಳಿದಿರುವಂತೆ ನನಗೂ ಸಂಖ್ಯೆಯು ತಿಳಿಯುತ್ತದೆ” ಎಂದು ಆಲೋಚಿಸಲು ಕಾರಣವಾಯಿತು. ಆದಾಮ ಮತ್ತು ಹವ್ವ ತನ್ನ ಮಾತನ್ನು ಕೇಳದೆ ಇದ್ದುದಕ್ಕೆ ಅಥವಾ ತನಗೆ ಅವಿಧೇಯರಾದುದಕ್ಕೆ ಭೂಮಿಯ ಮೇಲೆ ಎಂದಾದರೂ ಜೀವಿಸುವ ಪ್ರತಿಯೊಂದು ಆತ್ಮಕ್ಕೆ ಮರಣ, ನರಕ, ಮತ್ತು ಬೆಂಕಿಯ ಕೆರೆಯಲ್ಲಿ ಶಾಶ್ವತತೆಯ ಶಾಪವನ್ನು ನೀಡುವಷ್ಟು ಅವರ ಮೇಲೆ ಕೋಪಗೊಂಡ ದೇವರು, ದಾವೀದನು ಸೈತಾನನ ಆದೇಶವನ್ನು ಕೇಳಿ ಅದನ್ನು ಪಾಲಿಸಿದ ಅವಿಧೇಯತೆ ಮತ್ತು ಪಾಪವನ್ನು ಮಾಡಿ ತಪ್ಪಿಸಿಕೊಳ್ಳಲು ದೇವರು ಏಕೆ ಬಿಡುವರು?[2] ದೇವರು ವ್ಯಕ್ತಿಗಳನ್ನು ಗೌರವಿಸುವವರಲ್ಲ.[3] ತನಗೆ ಅವಿಧೇಯರಾದುದಕ್ಕೆ ಆದಾಮ ಮತ್ತು ಹವ್ವರಿಗೆ ಶಾಪ ನೀಡಿದ ಅವರು ತನಗೆ ಅತ್ಯಂತ ಪ್ರಿಯ ರಾಜನಾದ ದಾವೀದನಿಗೆ, ತನಗೆ ಅವಿಧೇಯನಾದುದಕ್ಕೆ ಶಾಪ ನೀಡಿದ ಅವರು, ಅವಿಧೇಯರಾದರೆ ನಿಮಗೆ ಮತ್ತು ನನಗೆ ಮತ್ತು ಎಲ್ಲರಿಗೂ ಶಾಪ ನೀಡದಿರಲು ಸಾಧ್ಯವೇ? [4]

ಇಸ್ರಾಯೇಲಿನ ಜನರ ಗಣತಿ ಮಾಡಲು ದಾವೀದನು ಯೋವಾಬನಿಗೆ ಆದೇಶ ನೀಡಿದ ನಂತರ, ಯೋವಾಬನು ದಾವೀದನಿಗೆ ಹೀಗೆಂದು ಉತ್ತರಿಸಿದನು, “ನನ್ನ

*(ಪುಟ 2ರಲ್ಲಿ ಮುಂದುವರಿದಿದೆ)*

---

**1** ಆದಿಕಾಂಡ 18:20-22, 19:1-25, ಅರಣ್ಯಕಾಂಡ 22:21-35, 2 ಸಮುವೇಲನು 24:10-16, 2 ಅರಸುಗಳು 6:8-17, 2 ಪೂರ್ವಕಾಲವೃತ್ತಾಂತ 20:1-29, 32:1-22, ಕೀರ್ತನೆಗಳು 34:7, 35:4-5, 68:17, ದಾನಿಯೇಲನು 6:21-22, ಜೆಕರ್ಯನು 1:7-21, 2:1-5, ಅಧ್ಯಾಯ 4, ಮತ್ತಾಯ 28:1-7, ಅಪೋಸ್ತಲರ ಕೃತ್ಯಗಳು 5:17-24, 12:1-12, 21-23, ಪ್ರಕಟನೆ 7:1-2, ಅಧ್ಯಾಯ 8, 9:1-5, 13-21, 14:6-11, 15-20, 15:1, 5-8, ಅಧ್ಯಾಯ 16, 18:1-6, 21, 19:17-18, 20:1-3 **2** ಆದಿಕಾಂಡ 2:16-17, 3:1-19, ರೋಮಾಪುರದವರಿಗೆ 5:12-18, 1 ಕೊರಿಂಥದವರಿಗೆ 15:22, 47 **3** ಯಾಜಕಕಾಂಡ 19:15, ಧರ್ಮೋಪದೇಶಕಾಂಡ 1:17, 16:19, 1 ಸಮುವೇಲನು 26:23, 1 ಅರಸುಗಳು 8:32, 2 ಪೂರ್ವಕಾಲವೃತ್ತಾಂತ 6:23, 19:7, ಕೀರ್ತನೆಗಳು 9:8, ಜ್ಞಾನೋಕ್ತಿಗಳು 24:23, 28:21, ಯೆಶಾಯ 45:21, ಅಪೋಸ್ತಲರ ಕೃತ್ಯಗಳು 10:34, ರೋಮಾಪುರದವರಿಗೆ 2:11, ಎಫೆಸದವರಿಗೆ 6:9, ಕೊಲೊಸ್ಸೆಯವರಿಗೆ 3:25, ಯಾಕೋಬನು 2:1-10, 1 ಪೇತ್ರನು 1:17, ಪ್ರಕಟನೆ 15:3 **4** ಆದಿಕಾಂಡ 3:1-19, ವಿಮೋಚನಕಾಂಡ 23:20-21, ಧರ್ಮೋಪದೇಶಕಾಂಡ 11:26-28, 28:61-63, 1 ಸಮುವೇಲನು 12:14-15, 15:22-23, 2 ಸಮುವೇಲನು ಅಧ್ಯಾಯ 11, 12:1-23, ಯೋಬನು 36:7-12, ಯೆರೆಮೀಯ 12:16-17, 18:9-10, ರೋಮಾಪುರದವರಿಗೆ 2:5-13, 6:12-16, ಎಫೆಸದವರಿಗೆ 5:3-6, 2 ಥೆಸಲೋನಿಕದವರಿಗೆ 1:7-9, ಇಬ್ರಿಯರಿಗೆ 2:1-4

# ದಿವ್ಯ ದೇವದೂತರು ನಮ್ಮ ಗ್ರಹದ ಮೇಲೆ ಸುತ್ತುತ್ತಿದ್ದಾರೆ

*(ಪುಟ 1 ರಿಂದ ಮುಂದುವರಿದಿದೆ)*

ಒಡೆಯನಾದ ಅರಸನೇ, ಯೆಹೋವನು ತನ್ನ ಪ್ರಜೆಗಳನ್ನು ನೂರರಷ್ಟು ಹೆಚ್ಚಿಸಲಿ. ಅವರೆಲ್ಲರೂ ನನ್ನ ಒಡೆಯನ ದಾಸರಷ್ಟೆ. ಒಡೆಯನು ಇಂಥದನ್ನು ಅಪೇಕ್ಷಿಸುವುದೇನು? ಇಸ್ರಾಯೇಲ್ಯರನ್ನು ಅಪರಾಧಕ್ಕೆ ಗುರಿ ಮಾಡುವುದೇಕೆ?" ಆದರೆ ಅರಸನು ಯೋವಾಬನಿಗೆ ಕಿವಿಗೊಡದೆ ತನ್ನ ಮಾತನ್ನೇ ಸಾಧಿಸಿದ್ದರಿಂದ ಅವನು ಹೊರಟುಹೋಗಿ ಇಸ್ರಾಯೇಲ್ಯರ ಎಲ್ಲಾ ಪ್ರಾಂತಗಳಲ್ಲಿ ಸಂಚರಿಸಿ ಯೆರೂಸಲೇಮಿಗೆ ಹಿಂದಿರುಗಿದನು. ಯೋವಾಬನು ದಾವೀದನಿಗೆ ಒಪ್ಪಿಸಿದ ಎಣಿಕೆಯ ಸಂಖ್ಯೆಯು - ಇಸ್ರಾಯೇಲ್ಯರಲ್ಲಿ ಯುದ್ಧಕ್ಕೆ ಹೋಗತಕ್ಕ ಸೈನಿಕರ ಸಂಖ್ಯೆ ಹನ್ನೊಂದು ಲಕ್ಷ [11,00,000], ಮತ್ತು ಯೂದಾಯದವರಲ್ಲಿ ನಾಲ್ಕು ಲಕ್ಷದ ಎಪ್ಪತ್ತು ಸಾವಿರ [4,70,000]. ಅರಸನ ಅಪ್ಪಣೆಯು ಯೋವಾಬನಿಗೆ [ದೇವರಿಗೆ ಆದಂತೆ] ಅಸಹ್ಯವಾಗಿದ್ದರಿಂದ ಅವನು ಇವರೊಡನೆ ಲೇವಿ ಬೆನ್ಯಾಮೀನ್ ಕುಲಗಳವರ ಎಣಿಕೆಯನ್ನು ಮಾಡಲಿಲ್ಲ.

"ಜನರ ಎಣಿಕೆ ಮಾಡಿದ್ದು ದೇವರಿಗೆ ಕೆಟ್ಟದ್ದೆಂದು ಕಂಡದ್ದರಿಂದ ಆತನು ಇಸ್ರಾಯೇಲ್ಯರನ್ನು ಬಾಧಿಸಿದನು. ಆಗ ದಾವೀದನು - ನಾನು ಬುದ್ಧಿಹೀನ ಕಾರ್ಯವನ್ನು ಮಾಡಿ ಪಾಪಿಯಾಗಿದ್ದೇನೆ; ದಯವಿಟ್ಟು ನಿನ್ನ ಸೇವಕನ ಅಪರಾಧವನ್ನು ಕ್ಷಮಿಸು ಎಂದು ದೇವರನ್ನು ಪ್ರಾರ್ಥಿಸಲು ಆತನು ದಾವೀದನ ದರ್ಶಿಯಾದ [ಪ್ರವಾದಿ] ಗಾದನಿಗೆ ಹೇಳಿದ್ದೇನೆಂದರೆ - ನೀನು ದಾವೀದನ ಹತ್ತಿರ ಹೋಗಿ ಅವನಿಗೆ - ನಾನು ಮೂರು ವಿಧವಾದ ಶಿಕ್ಷೆಗಳನ್ನು [ಮೂರು ಶಾಪಗಳು-ಅವುಗಳನ್ನುಒಂದನ್ನು ಆರಿಸಬಹುದು] ನಿನ್ನ ಮುಂದೆ ಇಡುತ್ತೇನೆ. ಅವುಗಳಲ್ಲಿ ಯಾವುದನ್ನು ನಿನ್ನ ಮೇಲೆ ಬರಮಾಡಬೇಕೋ ಆರಿಸಿಕೋ ಎಂಬುದಾಗಿ ಹೇಳು ಎಂಬುದು. ಆಗ ಗಾದನು ದಾವೀದನ ಬಳಿಗೆ ಹೋಗಿ ಅವನಿಗೆ - ಯೆಹೋವನು ಹೇಳುವುದೇನಂದರೆ - ಮೂರುವರುಷಗಳ ಕಾಲ ಬರವು ಉಂಟಾಗಬೇಕೋ, ಇಲ್ಲವೆ ಮೂರು ತಿಂಗಳುಗಳ ವರೆಗೆ ನಿನ್ನ ಶತ್ರುಗಳ ಕತ್ತಿಗೆ ಬಲಿಯಾಗುವುದು ಬೇಕೋ, ಇಲ್ಲವೇ ಇಸ್ರಾಯೇಲ್ಯರ ಸಮಸ್ತ ಪ್ರಾಂತಗಳಲ್ಲಿ ಯೆಹೋವನು ಕಳುಹಿಸಿದ ಸಂಹಾರಕದೂತನಿಂದುಂಟಾಗುವ ಮೂರು ದಿನಗಳ ಘೋರ ವ್ಯಾಧಿ ರೂಪವಾದ ಯೆಹೋವನ ಕತ್ತಿಯು ಬೇಕೋ? ಈ ಮೂರರಲ್ಲಿ ಒಂದನ್ನು ಆರಿಸಿಕೋ ಎಂಬುದೇ. ನನ್ನನ್ನು ಕಳುಹಿಸಿದವನಿಗೆ ಯಾವ ಉತ್ತರವನ್ನು ತೆಗೆದುಕೊಂಡು ಹೋಗಬೇಕೋ ಆಲೋಚಿಸಿ ಹೇಳು ಎಂದು ಹೇಳಿದನು. ಅದಕ್ಕೆ ದಾವೀದನು - ನಾನು ಬಲು ಇಕ್ಕಟ್ಟಿನಲ್ಲಿರುತ್ತೇನೆ. ಯೆಹೋವನ ಹಸ್ತದಲ್ಲಿ ಬೀಳುತ್ತೇನೆ; ಆತನು ಕೃಪಾಪೂರ್ಣನು. ಮನುಷ್ಯರ ಕೈಯಲ್ಲಿ ಬೀಳಲೊಲ್ಲೆನು ಎಂದು ಹೇಳಿದನು.

"ಆಗ ಯೆಹೋವನು ಇಸ್ರಾಯೇಲ್ಯರ ಮೇಲೆ ವ್ಯಾಧಿಯನ್ನು ಬರಮಾಡಿದನು; ಇದರಿಂದಾಗಿ ಎಪ್ಪತ್ತು ಸಾವಿರ ಜನರು ಸತ್ತರು. ದೇವರು ಯೆರೂಸಲೇಮನ್ನೂ ಸಂಹರಿಸುವುದಕ್ಕೆ ದೂತನನ್ನು [ಕೇವಲ ಒಬ್ಬ ದೇವದೂತನು ನಿಯಂತ್ರಿಸುತ್ತಿದ್ದ ಒಂದು ಹಾರಾಡುವ ತಟ್ಟೆ] ಕಳುಹಿಸಿದನು; ಆದರೆ ಆ ದೂತನು ಸಂಹರಿಸುವುದರಲ್ಲಿದ್ದಾಗ ಯೆಹೋವನು ಅದನ್ನು ಕಂಡು, ಆ ಕೇಡಿನ ವಿಷಯದಲ್ಲಿ ಪಶ್ಚಾತ್ತಾಪಪಟ್ಟು ಆ [ನಿಗಾ ಇಡುವವನು] ಸಂಹಾರಕದೂತನಿಗೆ - ಸಾಕು, ನಿನ್ನ ಕೈಯನ್ನು ಹಿಂದೆಗೆ ಎಂದು ಆಜ್ಞಾಪಿಸಿದನು. ಆಗ [ನಿಗಾ ಇಡುವವನು] ಯೆಹೋವನ ದೂತನು ಯೆಬೂಸಿಯನಾದ ಒರ್ನಾನನ ಕಣದಲ್ಲಿ ನಿಂತನು. ದಾವೀದನು ಕಣ್ಣೆತ್ತಿ ನೋಡಿ  ಯೆಹೋವನ ದೂತನು [ನಿಗಾ ಇಡುವವನು] ಭೂಮ್ಯಾಕಾಶಗಳ ನಡುವೆ ನಿಂತಿರುವುದನ್ನೂ ಚಾಚಿದ ಕೈಯಲ್ಲಿ ಯೆರೂಸಲೇಮಿಗೆ ವಿರೋಧವಾಗಿ ಹಿರಿದ ಕತ್ತಿಯಿರುವದನ್ನೂ ಕಂಡರು.

"ನಂತರ ದಾವೀದನು ಮತ್ತು ಇಸ್ರೇಲಿನ ಹಿರಿಯರು ಗೋಣಿಯನ್ನು ಧರಿಸಿ [ಅಂದರೆ ಉಪವಾಸವಿದ್ದರು] ಬೋರಲುಬಿದ್ದರು. ಮತ್ತು ದಾವೀದನು ದೇವರಿಗೆ - ಜನರನ್ನು ಲೆಕ್ಕಿಸಬೇಕೆಂದು ಆಜ್ಞಾಪಿಸಿದವನು ನಾನಲ್ಲ! ಪಾಪಮಾಡಿದವನು ನಾನೇ; ಕುರಿಗಳಂತಿರುವ ಈ ಜನರು ಏನು ಮಾಡಿದ್ದಾರೆ? ಯೆಹೋವನೇ, ನನ್ನ ದೇವರೇ, ನಿನ್ನ ಹಸ್ತವು ನಿನ್ನ ಜನರಿಗೆ ವಿರೋಧವಾಗಿ  ಅವರನ್ನು ಬಾಧಿಸುವ ಬದಲಿಗೆ ನನಗೂ ನನ್ನ ಮನೆಯವರಿಗೂ ವಿರೋಧವಾಗಿರಲಿ ಎಂದು ಬೇಡಿಕೊಂಡನು. ಆಗ ಯೆಹೋವನ ದೂತನು ಗಾದನಿಗೆ [ಪ್ರವಾದಿ] - ಯೆಬೂಸಿಯನಾದ ಒರ್ನಾನನ ಕಣದಲ್ಲಿ ಯೆಹೋವನಿಗೋಸ್ಕರ ಒಂದು ಯಜ್ಞವೇದಿಯನ್ನು ಕಟ್ಟಿಸುವದಕ್ಕೆ ಹೋಗಬೇಕು ಎಂದು ದಾವೀದನಿಗೆ ಹೇಳು ಎಂಬುದಾಗಿ ಆಜ್ಞಾಪಿಸಿದನು. ದಾವೀದನು ಗಾದನ ಮುಖಾಂತರ ತನಗಾದ ಯೆಹೋವನ ಅಪ್ಪಣೆಯಂತೆ ಹೊರಟನು.

"ಅಷ್ಟರಲ್ಲಿ ಗೋಧಿಯನ್ನು ತುಳಿಸುತ್ತಿದ್ದ ಒರ್ನಾನನು ಹಿಂತಿರುಗಿಕೊಂಡು ದೂತನನ್ನು ನೋಡಿದನು. ಅವನೊಡನಿದ್ದ ಅವನ ನಾಲ್ಕು ಮಂದಿ ಮಕ್ಕಳು ಅಡಗಿಕೊಂಡಿದ್ದರು [ಇಂದಿನ ಜನರು ಕೆಲವೊಮ್ಮೆ ಹಾರುವ ತಟ್ಟೆಗಳನ್ನು, ಯುಎಫ್‌ಒಗಳನ್ನು, ದೇವರ ದೂತರನ್ನು, ತಮ್ಮ ಮೇಲೆ ಸುತ್ತುತ್ತಿರುವುದನ್ನು ನೋಡಿದಾಗ ಮಾಡುವಂತೆ; ಇವು ಬೇರೆ ಯಾವುದೋ ಗ್ರಹದಿಂದ ಬಂದವುಗಳಲ್ಲ, ಸ್ವರ್ಗದಿಂದ ಬಂದವು!]. ದಾವೀದನು ತನ್ನ ಬಳಿಗೆ ಬರುವುದನ್ನು ಒರ್ನಾನನು ಕಂಡು ಕಣವನ್ನು ಬಿಟ್ಟುಹೋಗಿ ಅವನಿಗೆ ಅಡ್ಡಬಿದ್ದನು [ಒರ್ನಾನನು ದೇವದೂತನನ್ನು ನೋಡಿ ನಂತರ ದಾವೀದನನ್ನು ನೋಡಿದಾಗ, ಅವನಿಗೆ ದೇವದೂತನ ಮತ್ತು ದಾವೀದನ ನಡುವೆ ಒಂದು ಬಲವಾದ ಸಂಪರ್ಕದ ಭಾಸವಾಯಿತು. ಒರ್ನಾನನಿಗೆ ಹೆದರಿಕೆಯಾಗಿ, ದಾವೀದನ ಮುಂದೆ ತಲೆ ಬಾಗಿದನು]. ದಾವೀದನು ಅವನಿಗೆ - ನಿನ್ನ ಕಣವನ್ನೂ ಭೂಮಿಯನ್ನೂ ನನಗೆ ಕೊಡು; ವ್ಯಾಧಿಯು ಜನರನ್ನು ಬಿಟ್ಟುಹೋಗುವಂತೆ ನಾನು ಅದರಲ್ಲಿ ಯೆಹೋವನಿಗೋಸ್ಕರ ಒಂದು ವೇದಿಕೆಯನ್ನು ಕಟ್ಟಿಸುತ್ತೇನೆ; ಪೂರ್ಣಕ್ರಯ ತೆಗೆದುಕೊಂಡು ಅದನ್ನು ಕೊಡು ಎಂದು ಹೇಳಿದನು. ಆಗ ಒರ್ನಾನು ದಾವೀದನಿಗೆ - ನನ್ನ ಒಡೆಯನಾದ ಅರಸನು ತನಗೆ ಇಷ್ಟವಾದದ್ದನ್ನು ತೆಗೆದುಕೊಂಡು ಯಜ್ಞಮಾಡೋಣವಾಗಲಿ. ಇಲ್ಲಿ ಯಜ್ಞಕ್ಕೆ ಹೋರಿಗಳೂ ಸೌದೆಗೆ ಹಂತೀಕುಂಟೆಗಳೂ ನೈವೇದ್ಯಕ್ಕೋಸ್ಕರ ಗೋಧಿಯೂ ಇರುತ್ತವೆ; ಇವೆಲ್ಲವನ್ನೂ ಕೊಡುತ್ತೇನೆ ಎಂದು ಹೇಳಿದನು. ಅರಸನಾದ ದಾವೀದನು ಒರ್ನಾನನಿಗೆ - ಹಾಗಲ್ಲ, ನಾನು ನಿನ್ನಿಂದ ಪೂರ್ಣಕ್ರಯಕ್ಕೆ ತೆಗೆದುಕೊಳ್ಳುತ್ತೇನೆ. ನಿನ್ನದನ್ನು ಕ್ರಯವಿಲ್ಲದೆ ತೆಗೆದುಕೊಂಡು ಯೆಹೋವನಿಗೆ ಯಜ್ಞವಾಗಿ ಅರ್ಪಿಸಲೊಲ್ಲೆನು ಎಂದು ಹೇಳಿ ಆ ಭೂಮಿಗೋಸ್ಕರ ಅವನಿಗೆ ಆರುನೂರು ತೊಲೆ ಬಂಗಾರವನ್ನು ಕೊಟ್ಟು ಅಲ್ಲಿ ಯೆಹೋವನಿಗೋಸ್ಕರ ಯಜ್ಞವೇದಿಕೆಯನ್ನು ಕಟ್ಟಿಸಿ ಅದರ ಮೇಲೆ ಆತನಿಗೆ ಸರ್ವಾಂಗ ಹೋಮಗಳನ್ನೂ ಸಮಾಧಾನಯಜ್ಞಗಳನ್ನೂ ಅರ್ಪಿಸಿ ಯೆಹೋವನನ್ನು ಪ್ರಾರ್ಥಿಸಿದನು. ಯೆಹೋವನು ಅವನ ಮೊರೆಯನ್ನು ಲಾಲಿಸಿ ಆಕಾಶದಿಂದ ಯಜ್ಞವೇದಿಕೆಯ ಮೇಲೆ ಬೆಂಕಿಯನ್ನು ಸುರಿಸಿ ಕತ್ತಿಯನ್ನು ಒರೆಯಲ್ಲಿ ಹಾಕಬೇಕೆಂದು ದೂತನಿಗೆ ಆಜ್ಞಾಪಿಸಿದನು. ಅವನು ಹಾಗೆಯೇ ಮಾಡಿದನು.

"ಯೆಬೂಸಿಯನಾದ ಒರ್ನಾನನ ಕಣದಲ್ಲಿ ದೇವರು ತನಗೆ ಪ್ರತ್ಯುತ್ತರ ಕೊಟ್ಟದ್ದನ್ನು ದಾವೀದನು ಕಂಡಾಗ, ಅವನು ಅಲ್ಲಿ ಬಲಿ ಅರ್ಪಿಸುತ್ತಾನೆ. ಮೋಶೆಯು ಅರಣ್ಯದಲ್ಲಿ ಮಾಡಿಸಿದ ಯೆಹೋವನ ಗುಡಾರ ಹಾಗೂ ಯಜ್ಞವೇದಿಕೆಯು ಆ ಕಾಲದಲ್ಲಿ ಗಿಬ್ಯೋನಿನ ಪೂಜಾಸ್ಥಳದಲ್ಲಿದ್ದವು. ಆದರೂ ದಾವೀದನು ಯಹೋವದೂತನ ಕತ್ತಿಗೆ ಹೆದರಿ ದೇವದರ್ಶನಕ್ಕೋಸ್ಕರ ಅಲ್ಲಿಗೆ ಹೋಗಲಾರದೆ ಇದ್ದನು (ಪೂರ್ವಕಾಲವೃತ್ತಾಂತ ಮೊದಲ ಭಾಗ 21:3-30). [ಇಂಗ್ಲಿಷಿನ ಕೆಜೆವಿ ಬೈಬಲ್ ನೋಡಿ]. ಶಪಿಸಲು ಮತ್ತು ನಾಶ ಮಾಡಲು ದೇವರು ತನ್ನ ದೂತರನ್ನು ಬಳಸುತ್ತಾರೆಂದು ತೋರಿಸುವ ಇತರ ಹಲವಾರು ವಾಕ್ಯಗಳು ಇವೆ.[5]

ಹಳೆಯ ಪ್ರವಾದಿಯಾದ ನಹೂಮರು ಇಂದಿನ ಫ್ರೀವೇ ಮತ್ತು ಮೋಟಾರು ವಾಹನಗಳನ್ನು ತನಗೆ ಗೊತ್ತಿದ್ದ ಒಂದೇ ರೀತಿಯಲ್ಲಿ ವಿವರಿಸಿದರು. ನಹೂಮ 2:4 ಹೀಗೆಂದು ಹೇಳುತ್ತದೆ, "ಪಟ್ಟಣದ ಹೊರಗೆ ರಥಗಳು ರಭಸದಿಂದ ತಿರುಗಾಡುತ್ತವೆ, ಮೈದಾನದಲ್ಲಿ ಧಡಧಡ ಓಡಾಡುತ್ತವೆ; ಪಂಜುಗಳಂತೆ ಬೆಳಗು-

---

5 ಆದಿಕಾಂಡ 19:1-25, ಅರಣ್ಯಕಾಂಡ 22:1-35, 25:1-9, 2 ಸಮುವೇಲನು 24:1-17, 2 ಅರಸುಗಳು 19:35, 1 ಪೂರ್ವಕಾಲವೃತ್ತಾಂತ 21:9-30, 2 ಪೂರ್ವಕಾಲವೃತ್ತಾಂತ 32:19-22, ಪ್ರಕಟನೆ 7:1-2, ಅಧ್ಯಾಯ 8, 9:1-5, 13-21, 14:8-11, 15-20, ಅಧ್ಯಾಯ 16, 18:1-2, 21, 19:17-21, 20:1-3, 21:9

## ಮಲಾವಿ

ಕ್ರಿಸ್ತರಲ್ಲಿ ಅತ್ಯಂತ ಪ್ರಿಯರಾದವರೆ,

ಪ್ರಭುವಿನಲ್ಲಿ ನಮಸ್ಕಾರಗಳು. ನೀವು ಕಳುಹಿಸಿದ ಪಾರ್ಸಲ್ ಅಗತ್ಯವಿದ್ದ ಸಮಯಕ್ಕೆ ಸರಿಯಾಗಿ ನನಗೆ ತಲುಪಿತು ಎಂದು ನಾನು ನಿಮಗೆ ತಿಳಿಸಲು ಇಚ್ಛಿಸುತ್ತೇನೆ. ಹಲವಾರು ಜನರು ಯೇಸುವನ್ನು ತಮ್ಮ ಪ್ರಭುವನ್ನಾಗಿ ಸ್ವೀಕರಿಸಿದ ತಾಂಡೀಜಿ ವ್ಯಾಪಾರ ಕೇಂದ್ರದಲ್ಲಿ ನಾವು ಹಂಚಿದೆವು. ಆಮೆನ್.

ನಮ್ಮ ಕೋರಿಕೆ ಏನೆಂದರೆ ಇನ್ನೂ ಹೆಚ್ಚಿನ ಬೈಬಲ್ ಗಳನ್ನು, ದ ಮೆಸ್ಸೈಅ ಪುಸ್ತಕಗಳನ್ನು ಮತ್ತು ಸುದ್ದಿಪತ್ರಿಕೆಗಳನ್ನುಮಾತ್ರವಲ್ಲದೆ ನಮ್ಮ ತಂಡದ ಸದಸ್ಯರಿಗಾಗಿ ಟಿ -ಷರ್ಟ್ ಗಳನ್ನು ಕಳುಹಿಸಲು ದಯವಿಟ್ಟು ಹಿಂಜರಿಯಬೇಡಿ.

ನಾವು ಯಾವಾಗಲೂ ಪ್ಯಾಸ್ಟರ್ ಅಲಾಮೊಗಾಗಿ ಮತ್ತು ಮಿನಿಸ್ಟ್ರಿಗಾಗಿ, ನೀವು ಅನುಭವಿಸುತ್ತಿರುವ ಪರಿಸ್ಥಿತಿಗಾಗಿ, ಪ್ರಾರ್ಥಿಸುತ್ತೇವೆ.

ಪ್ರಭುವಿನಲ್ಲಿ ನಿಮ್ಮವರಾದ,

ಎವಾನ್ಸ್ ನೌಲಿಯ — ಲಿಂಬೆ, ಮಲಾವಿ

ತ್ರವೆ, ಮಿಂಚುಗಳ ಹಾಗೆ ಹಾರುತ್ತವೆ." ಇವು ಮೋಟಾರು ವಾಹನಗಳ ಮತ್ತು ಫ್ರೀವೇಗಳ ಬಗ್ಗೆ ಅಂತ್ಯ ಕಾಲದ ಭವಿಷ್ಯವಾಣಿಗಳಾಗಿವೆ.

ಇತರ ಯಾವುದೇ ಗ್ರಹದ ಮೇಲಾಗಲಿ, ದೇವರ ಇತರ ಯಾವುದೇ ಸೃಷ್ಟಿಯ ಮೇಲಾಗಲಿ ಜೀವವಿಲ್ಲ. ಆದ್ದರಿಂದ, ಹಾರುವ ತಟ್ಟೆಗಳು ಮತ್ತು ಯುಎಫ್‌ಒಗಳು ಬೇರೆ ಯಾವುದೇ ಗ್ರಹದಿಂದ ಬಂದವು ಎಂದು ಆಲೋಚಿಸುವುದು ಸಂಪೂರ್ಣವಾಗಿ ಹಾಸ್ಯಾಸ್ಪದವೂ ಅಸಂಬದ್ಧವೂ ಆಗಿದೆ. ಅವು ಸ್ವರ್ಗದಿಂದ ಬರುತ್ತವೆ.

ಎಲ್ಲಕ್ಕಿಂತ ಹೆಚ್ಚಾಗಿ, ತನ್ನನ್ನು ನಂಬಬೇಕೆಂದು ದೇವರು ಬಯಸುತ್ತಾರೆ, ಮತ್ತು ನೀವು ಆತನ ಆಜ್ಞೆಗಳನ್ನು ಉಲ್ಲಂಘಿಸಿದಾಗ, ನೀವು ಆತನನ್ನು ನಂಬುತ್ತಿಲ್ಲ ಎಂದು ಆತನಿಗೆ ತಿಳಿದಿದೆ. ತನ್ನ ಸ್ವರ್ಗ ಮತ್ತು ತನ್ನ ಭೂಮಿಯ ಕುರಿತು ದೇವರು ಹೀಗೆನ್ನುತ್ತಾರೆ. ಆದಿಕಾಂಡ 1:14-15ರಲ್ಲಿ, "ಬಳಿಕ ದೇವರು - ಆಕಾಶಮಂಡಲದಲ್ಲಿ ಬೆಳಕುಗಳು ಉಂಟಾಗಲಿ; ಅವು ಹಗಲಿರುಳುಗಳನ್ನು ಬೇರೆ ಬೇರೆ ಮಾಡಲಿ; ಇದಲ್ಲದೆ ಅವು ಗುರುತುಗಳಾಗಿದ್ದು ಸಮಯಗಳನ್ನೂ [ಭೂಮಿಯ ಮೇಲೆ, ಬೇರೆ ಯಾವುದೇ ಗ್ರಹದ ಮೇಲಲ್ಲ] ದಿನಸಂವತ್ಸರಗಳನ್ನೂ [ಪುನಃ, ಭೂಗ್ರಹಕ್ಕೆ ಮಾತ್ರ] ತೋರಿಸಲಿ; ಮತ್ತು ಭೂಮಿಯ [ಮಂಗಳ, ಗುರು, ಬುಧ ಅಥವಾ ಬೇರೆ ಯಾವ ಗ್ರಹದ ಮೇಲೂ ಅಲ್ಲ] ಮೇಲೆ ಬೆಳಕು ಕೊಡುವುದಕ್ಕೆ ಅವು ಆಕಾಶಮಂಡಲದಲ್ಲಿ ದೀಪಗಳಂತಿರಲಿ ಅಂದನು; ಹಾಗೆಯೇ ಆಯಿತು." ನೀವು "ಭೂ ತಾಯಿ" ಎಂದು ಕರೆಯುವುದರ ಮೇಲೆ ಈಗ ನಡೆಯುತ್ತಿರುವ ಮತ್ತು ಹೆಚ್ಚುತ್ತಿರುವ ಭ್ರಷ್ಟಾಚಾರ ಮತ್ತು ಹಿಂಸೆಯಿಂದ ಪಾರಾಗುವಿರಿ ಎಂದು ಅಂದುಕೊಳ್ಳಬೇಡಿ. ಬದುಕಲು ಬೇರೆ ಯಾವುದೋ ಗ್ರಹಕ್ಕೆ ಹೋಗುವಿರಿ ಎಂದು ಅಂದುಕೊಳ್ಳಬೇಡಿ, ಏಕೆಂದರೆ ಬೇರೆಲ್ಲೂ ಜೀವಿಸಲು ಸಾಧ್ಯವಿಲ್ಲ. ನಿಮಗೆ ಭೂಮಿಯ ಮೇಲೆ ಶಾಂತಿ ಸಿಗುವುದಿಲ್ಲ, ಏಕೆಂದರೆ ನಾವು ಭ್ರಷ್ಟ ಜನರು, ಮತ್ತು ನಮ್ಮ ಹೃದಯಗಳಲ್ಲಿ ಪ್ರಭು ಇಲ್ಲದೆ, ನಾವು ಯಾವಾಗಲೂ ಭ್ರಷ್ಟರಾಗಿರುತ್ತೇವೆ. ಮಾತ್ರವಲ್ಲ, ಈ ಯುಎಫ್‌ಒಗಳು, ಹಾರುವ ತಟ್ಟೆಗಳು, ನಿಗಾ ಇಡುವವರು, ದೇವದೂತರು, ಬೇರೆ ಯಾವುದೋ ಗ್ರಹದಿಂದ ಬಂದವರು ಎಂಬ ಆಲೋಚನೆಯನ್ನು ದಯವಿಟ್ಟು ನಿಮ್ಮ ತಲೆಯಿಂದ ಹೊರಹಾಕಿ. ನೀವು ಇಂತಹ ಭ್ರಾಂತಿಯನ್ನು ನಂಬಿದರೆ, ದೇವರು 2 ಥೆಸಲೋನಿಕದವರಿಗೆ 2:8-12ರಲ್ಲಿ ಉಲ್ಲೇಖಿಸಿರುವಂತೆ, ಈಗಾಗಲೇ ಬಹಳ ಬಲವಾದ ಭ್ರಾಂತಿಯನ್ನು ನಿಮಗೆ ಕಳುಹಿಸಿದ್ದಾರೆ: "ಆ ಅಧರ್ಮಸ್ವರೂಪನು [ಪಿಶಾಚಿ, ಸೈತಾನ, ಕ್ರಿಸ್ತ ವಿರೋಧಿ] ಕಾಣಬರುವನು [ಇಂಗ್ಲೀಷಿನ ಕೆಜೆವಿ ಬೈಬಲ್ ನೋಡಿ]; ಅವನನ್ನು ಕರ್ತನು ತನ್ನ ಬಾಯ ಉಸಿರಿನಿಂದ ಕೊಲ್ಲುವನು, ತನ್ನ ಬರೋಣದ ಪ್ರಕಾಶದಿಂದ ಸಂಹರಿಸುವನು. ಸೈತಾನನ ಕಾರ್ಯಾಚರಣೆಯ ಬಳಿಕ ಬರುವಂತಹ ಅವನನ್ನು ಸಹ [ಎಲ್ಲಾ ದುರ್ಬಲ ಮತ್ತು ಕ್ಷುದ್ರ ಪೈಶಾಚಿಕ ಶಕ್ತಿ]. ಅದು ಮೋಸಗೊಳಿಸುವ ಸಕಲ ವಿಧವಾದ ಮಹತ್ಕಾರ್ಯ ಸೂಚಕ ಕಾರ್ಯ,ಅದ್ಭುತ ಕಾರ್ಯ [ದೇವದೂತರು ಅಥವಾ ಯುಎಫ್‌ಒಗಳು ಬೇರೆ ಗ್ರಹದಿಂದ ಬಂದವುಗಳಾಗಿವೆ, ಮತ್ತು ಇತರ ಗ್ರಹಗಳ ಮೇಲೆ ಜೀವಿಗಳಿವೆ, ಮತ್ತು ಈ ಭೂಮಿಯ ದುಷ್ಟ ಭ್ರಷ್ಟತೆಯಿಂದ ನೀವು ಬೇರೆ ಯಾವುದೋ ಗ್ರಹಕ್ಕೆ ಪಾರಾಗಲು ಬೇಗನೆ ಸಾಧ್ಯವಾಗುವುದು ಎಂದು ಹೇಳುವ ಸುಳ್ಳುಗಳು] ಇವುಗಳಿಂದಲೂ ಮತ್ತು ಎಲ್ಲಾ ವಂಚನೆಯಿಂದಲೂ [ಸಲಿಂಗ ವಿವಾಹಗಳು ತಪ್ಪಲ್ಲ, ಗರ್ಭಪಾತ, ಕೊಲೆ ತಪ್ಪಲ್ಲ,[6] ಸಲಿಂಗ ಸ್ತ್ರೀ ಕಾಮ ಮತ್ತು ಸಲಿಂಗ ಕಾಮ ತಪ್ಪಲ್ಲ[7], ವ್ಯಭಿಚಾರ[8] ಮತ್ತು ಅವಿವಾಹಿತರ ನಡುವೆ ಸಂಭೋಗ ತಪ್ಪಲ್ಲ[9], ಮದ್ಯ ಅಥವಾ ಮಾದಕವಸ್ತುಗಳೊಂದಿಗೆ ಮಾದಕತೆ ತಪ್ಪಲ್ಲ[10], ವಿನೋದ ತಪ್ಪಲ್ಲ[11], ಕಳುವು ಮಾಡುವುದು[12] ಮತ್ತು ಧರ್ಮನಿಂದನೆ ತಪ್ಪಲ್ಲ[13], ನಿಮ್ಮ ಕರ್ತನಾದ ದೇವರನ್ನು ನಿಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದೊಂದಿಗೆ ಪ್ರೀತಿಸದಿರುವುದು ತಪ್ಪಲ್ಲ[14], ಕರ್ತನ ಸೇವೆ ಮಾಡದಿರುವುದು ತಪ್ಪಲ್ಲ, ಮತ್ತು ಪರರ ವಸ್ತುವಿಗೆ ಆಸೆ ಪಡುವುದು ತಪ್ಪಲ್ಲ[15] ಎಂದು ಹೇಳುವುದು] ಕೂಡಿ ಅನೀತಿವಂತರ ನಾಶಕ್ಕಾಗಿ ಸಂಭವಿಸುವುದು. ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. ಅದೇ ಕಾರಣದಿಂದ ದೇವರು ಭ್ರಮೆಯನ್ನು ಅವರಲ್ಲಿಗೆ ಕಳುಹಿಸಿ ಆ ಸುಳ್ಳನ್ನು [ಇತರ ಗ್ರಹಗಳ ಮೇಲೆ ಜೀವವಿದೆ ಎಂಬಂತೆ ಯುಎಫ್‌ಒಗಳು ಬೇರೆ ಯಾವುದೋ ಗ್ರಹದಿಂದ ಬಂದಿವೆ ಎಂದು ಹೇಳುವಂಥ ಸುಳ್ಳು] ನಂಬುವುದಕ್ಕೆ ಅವರನ್ನು ಬಿಡುತ್ತಾನೆ. ಸತ್ಯವನ್ನು ನಂಬದೆ ಅನೀತಿಯಲ್ಲಿ ಆನಂದಪಡುವವರೆಲ್ಲರೂ ದೋಷಾರೋಪಣೆಗೆ ಒಳಗಾಗುವರು [ಇಂಗ್ಲಿಷಿನ ಕೆಜೆವಿ ಬೈಬಲ್ ನೋಡಿ].

ಆದಿಕಾಂಡ 1ಕ್ಕೆ ಹಿಂದಿರುಗೋಣ: "ದೇವರು ಹಗಲನ್ನಾಳುವುದಕ್ಕೆ ದೊಡ್ಡ ಬೆಳಕನ್ನೂ [ಸೂರ್ಯ] ಇರುಳನ್ನಾಳುವದಕ್ಕೆ ಚಿಕ್ಕ ಬೆಳಕನ್ನೂ [ಚಂದ್ರ] , ಈ ಎರಡು ದೊಡ್ಡ ಬೆಳಕುಗಳನ್ನು ಸೃಷ್ಟಿಮಾಡಿದನು. ಆತನು ನಕ್ಷತ್ರಗಳನ್ನು ಸಹ ಸೃಷ್ಟಿಮಾಡಿದನು. ದೇವರು ಆ ಬೆಳಕುಗಳನ್ನು ಆಕಾಶದಲ್ಲಿಟ್ಟು ಭೂಮಿಯ ಮೇಲೆ [ಬೇರೆ ಯಾವುದೇ ಗ್ರಹದ ಮೇಲಲ್ಲ] ಬೆಳಕುಕೊಡುವದಕ್ಕೂ ಹಗಲಿರುಳುಗಳನ್ನು ಆಳುವದಕ್ಕೂ ಬೆಳಕನ್ನು ಕತ್ತಲನ್ನು ಬೇರೆ ಬೇರೆ ಮಾಡುವದಕ್ಕೂ ಅವುಗಳನ್ನು ನೇಮಿಸಿದನು. ಆತನು ಅದು ಚೆನ್ನಾಗಿರುವುದನ್ನು ಕಂಡನು." (ಆದಿಕಾಂಡ 1:16-18)

ಈಗ ನೀವು ಯಾವುದನ್ನು ನಂಬುತ್ತೀರಿ? ಒಳ್ಳೆಯದನ್ನು ನಂಬುತ್ತೀರಾ ಅಥವಾ ದುಷ್ಟವಾದುದನ್ನು ನಂಬುತ್ತೀರಾ? ದೇವರು ನಮ್ಮನ್ನು ನೆಲದ ಮಣ್ಣಿನಿಂದ ಸೃಷ್ಟಿಸಿದರು ಎಂದು ನಂಬುತ್ತೀರಾ, ಅಥವಾ ವಿಜ್ಞಾನಿಗಳನ್ನು ನಂಬುತ್ತೀರಾ? ದೇವರನ್ನು ನಂಬುತ್ತೀರಾ ಅಥವಾ ಕಾರ್ಬನ್ ಡೇಟಿಂಗ್ ಯಂತ್ರಗಳನ್ನು ನಂಬುತ್ತೀರಾ? ಬೇರೆ ಮಾತಿನಲ್ಲಿ ಹೇಳಬೇಕಾದರೆ, ಕರ್ತನು ಹೇಳಿದಂತೆ, ಜಗತ್ತು 6,000 ವರ್ಷ ಹಳೆಯದು ಎಂದು ನಂಬುತ್ತೀರಾ, ಅಥವಾ ನಾಸ್ತಿಕರು ಹೇಳುವಂತೆ, ಜಗತ್ತು ದಶಲಕ್ಷಗಟ್ಟಲೆ ಅಥವಾ ಶತಕೋಟಿಗಟ್ಟಲೆ ವರ್ಷಗಳಷ್ಟು ಹಳೆಯದು ಎಂಬ ಸುಳ್ಳನ್ನು ನಂಬುತ್ತೀರಾ? ನೀವು ದೇವರ ಪದದ ಬದಲು ಸುಳ್ಳನ್ನು ನಂಬುವಿರಾದರೆ, ನೀವು ಬಲವಾದ ಭ್ರಮೆಯನ್ನು ಪಡೆದಿದ್ದೀರಿ, ಮತ್ತು ಶಾಪಗ್ರಸ್ತರಾಗಿದ್ದೀರಿ.[16] ಆಶಾದಾಯಕವಾಗಿ, ನಿಮ್ಮ ಸಲುವಾಗಿ, ಇದು ಸತ್ಯವಲ್ಲ. ನೀವು ರಕ್ಷಣೆ ಹೊಂದಬೇಕೆಂದು ಮತ್ತು ಆತನ ಮಗನಾದ ಕ್ರಿಸ್ತ ಯೇಸುವಿನ ಮೂಲಕ ದೇವರನ್ನು ನಂಬಿರುವ ಎಲ್ಲರೊಂದಿಗೆ, ಶಾಶ್ವತತೆಯನ್ನು ಸ್ವರ್ಗದಲ್ಲಿ ತಂದೆಯಾದ, ಮಗನಾದ, ಮತ್ತು ಪವಿತ್ರಾತ್ಮನಾದ ದೇವರೊಂದಿಗೆ ಕಳೆಯಬೇಕೆಂದು ಇಚ್ಛಿಸಿದರೆ ಈ ಪ್ರಾರ್ಥನೆಯನ್ನು ಹೇಳಿ:

*(ಪುಟ 4ರಲ್ಲಿ ಮುಂದುವರಿದಿದೆ)*

## ಭಾರತ

ಕ್ರಿಸ್ತರಲ್ಲಿ ಅತ್ಯಂತ ಪ್ರಿಯರಾದ ಸಹೋದರರೇ ಮತ್ತು ಸಹೋದರಿಯರೇ,

ನಿಮಗೆ ಪವಿತ್ರ ಶುಭಾಶಯಗಳು. ಇಂದು ನಾವು ಅದ್ಭುತ ಸಾಹಿತ್ಯವನ್ನು ಪಡೆದೆವು. ನಮಗೆ ಬಹಳ ಸಂತೋಷವಾಗಿದೆ, ಏಕೆಂದರೆ ನನ್ನ ಪವಿತ್ರಸ್ನಾನ ಸೇವೆಯ ಭಾವಚಿತ್ರಗಳೂ ನಿಮ್ಮ ಸುದ್ದಿಪತ್ರಿಕೆಯಲ್ಲಿದ್ದವು!

ನಿಮ್ಮ ಪ್ರಾರ್ಥನೆಯ ಬೆಂಬಲದಿಂದ, ಇಲ್ಲಿ ನಾವು ಮಾರ್ಚ್ 4, 5, ಮತ್ತು 6ರಂದು ಯಶಸ್ವಿಯಾಗಿ ಸುವಾರ್ತಾ ಸಭೆಗಳನ್ನು ನಡೆಸಿದೆವು. ನಾನು ಆ ಫೋಟೋಗಳನ್ನು ಕೂಡ ಕಳುಹಿಸಬೇಕೆಂದಿದ್ದೇನೆ. ಆ ಸಭೆಗಳಲ್ಲಿ, ನಾವು ದೇವರ ಮತ್ತು ಮಹಾಪ್ರಭುವಿನ ಶಕ್ತಿಯನ್ನು ಸಾರಿದೆವು. ಆ ಸಭೆಗಳಲ್ಲಿ ಎಷ್ಟೋ ಹಿಂದೂ ಜನರು ದೇವರ ರಕ್ಷಣೆಯ ಯೋಜನೆಯನ್ನು ಪಡೆದರು.

ಇಲ್ಲಿ ನಾವೆಲ್ಲರೂ ಪ್ಯಾಸ್ಟರ್ ಟೋನಿಯವರ ಆರೋಗ್ಯಕ್ಕಾಗಿ ಮತ್ತು ನಿಮ್ಮ ಮಿನಿಸ್ಟ್ರಿಗಳಿಗಾಗಿ ಪ್ರಾರ್ಥಿಸುತ್ತಿದ್ದೇವೆ. ದೇವರು ನಿಮಗೆ ಒಳಿತನ್ನು ಮಾಡಲಿ.

ಕ್ರಿಸ್ತರಲ್ಲಿ ನಿಮ್ಮ ಸಹೋದರ,
ಸೋಲ್ಮನ್ ರಾಜು ಕೋಲ ಆಂಧ್ರ ಪ್ರದೇಶ, ಭಾರತ

**6** ಆದಿಕಾಂಡ 9:5-6, ವಿಮೋಚನಕಾಂಡ 20:13, 21:12-15, 22-23, ಯಾಜಕಕಾಂಡ 24:17, ಅರಣ್ಯಕಾಂಡ 35:16-21, 30-33, ಧರ್ಮೋಪದೇಶಕಾಂಡ 5:17, 27:24-25, ಕೀರ್ತನೆಗಳು 139:13-16, ಜ್ಞಾನೋಕ್ತಿಗಳು 1:10-16, 6:16-18, ಯೆರೆಮೀಯ 1:5, ಮತ್ತಾಯ 19:18, ಮಾರ್ಕ 10:19, ಲೂಕ 18:20, ರೋಮಾಪುರದವರಿಗೆ 13:9, ಗಲಾತ್ಯದವರಿಗೆ 5:19-21, 1 ತಿಮೊಥೆಯನಿಗೆ 1:9-10, ಯಾಕೋಬನು 2:11, 1 ಯೋಹಾನನು 3:15, ಪ್ರಕಟನೆ 9:20-21, 21:8, 22:14-15 **8** ಆದಿಕಾಂಡ 19:1-13, 24-25, ಯಾಜಕಕಾಂಡ 18:22, 20:13, ಧರ್ಮೋಪದೇಶಕಾಂಡ 22:5, 23:17, ನ್ಯಾಯಸ್ಥಾಪಕರು 19:22-25, ರೋಮಾಪುರದವರಿಗೆ 1:20-32, 1 ಕೊರಿಂಥದವರಿಗೆ 6:9-10, 1 ತಿಮೊಥೆಯನಿಗೆ 1:9-10, 2 ತಿಮೊಥೆಯನಿಗೆ 3:1-5, ಯೂದನು 75 ಆದಿಕಾಂಡ 19:1-25, ಅರಣ್ಯಕಾಂಡ 22:1-35, 25:1-9, 2 ಸಮುವೇಲನು 24:1-17, 2 ಅರಸುಗಳು 19:35, 1 ಪೂರ್ವಕಾಲವೃತ್ತಾಂತ 21:9-30, 2 ಪೂರ್ವಕಾಲವೃತ್ತಾಂತ 32:19-22, ಪ್ರಕಟನೆ 7:1-2, ಅಧ್ಯಾಯ 8, 9:1-5, 13-21, 14:8-11, 15-20, ಅಧ್ಯಾಯ 16, 18:1-2, 21, 19:17-21, 20:1-3, 21:9 8 ವಿಮೋಚನಕಾಂಡ 20:14, ಯಾಜಕಕಾಂಡ 18:20, 20:10, ಧರ್ಮೋಪದೇಶಕಾಂಡ 5:18, 22-24, 1 ಅರಸುಗಳು 14:24, 15:11-12, ಜ್ಞಾನೋಕ್ತಿಗಳು 6:29, 32-33, ಯೆರೆಮೀಯ 5:8-9, ಯೆಹೆಜ್ಕೇಲನು 18:10-13, 22:11, ಮಲಾಕಿಯನು 3:5 ಮತ್ತಾಯ 5:27-28, 15:19-20, 19:18, ಮಾರ್ಕ 7:21-23, ಲೂಕ 18:20, ರೋಮಾಪುರದವರಿಗೆ 13:9, 1 ಕೊರಿಂಥದವರಿಗೆ 6:9-10, ಯಾಕೋಬನು 2:10-12 **9** 1 ಕೊರಿಂಥದವರಿಗೆ 5:9-11, 6:9-10, 13-18, 7:2, 10:7-8, 2 ಕೊರಿಂಥದವರಿಗೆ 12:21, ಎಫೆಸದವರಿಗೆ 5:3, ಕೊಲೊಸ್ಸೆಯವರಿಗೆ 3:5-6, 1 ಥೆಸಲೋನಿಕದವರಿಗೆ 4:3-5, ಯೂದನು 7, ಪ್ರಕಟನೆ 2:14, 20-22, 9:20-21 **10** ಧರ್ಮೋಪದೇಶಕಾಂಡ 21:20-21, ಜ್ಞಾನೋಕ್ತಿಗಳು 23:21, 29-35, 31:4-5, ಯೆಶಾಯ 5:11, 22-23, 28:1-4, ನಹೂಮ 1:9-10, ಲೂಕ 21:33-36, ರೋಮಾಪುರದವರಿಗೆ 13:12-14, 1 ಕೊರಿಂಥದವರಿಗೆ 5:10-12, 6:9-10, ಗಲಾತ್ಯದವರಿಗೆ 5:19-23, 1 ಥೆಸಲೋನಿಕದವರಿಗೆ 5:6-8, 1 ತಿಮೊಥೆಯನಿಗೆ 3:8-9, ತೀತನಿಗೆ 1:7-9, 2:1-5, 1 ಪೇತ್ರನು 4:1-5, 2 ಪೇತ್ರನು 1:5-8 **11** ಪ್ರಸಂಗಿ 2:1-3, 7:2-6, ಮತ್ತಾಯ 12:36, ಎಫೆಸದವರಿಗೆ 5:3-4, 1 ತಿಮೊಥೆಯನಿಗೆ 2:9-10, 15, ತೀತನಿಗೆ 2:1-8, 12, 1 ಪೇತ್ರನು 1:13-16, 4:7, 5:8 **12** ವಿಮೋಚನಕಾಂಡ 20:15, 22:1-4, ಯಾಜಕಕಾಂಡ 19:11, 13, ಧರ್ಮೋಪದೇಶಕಾಂಡ 5:19, ಜೆಕರ್ಯನು 5:3, ಮತ್ತಾಯ 15:19-20, 19:18, ಮಾರ್ಕ 7:21-23, ಲೂಕ 18:20, 19:45-46, ರೋಮಾಪುರದವರಿಗೆ 13:9, 1 ಕೊರಿಂಥದವರಿಗೆ 6:10, ಎಫೆಸದವರಿಗೆ 4:28, ಪ್ರಕಟನೆ 9:21 **13** ಯಾಜಕಕಾಂಡ 24:11-16, 23, ಮತ್ತಾಯ 12:22-32, 15:19-20, ಲೂಕ 12:9-10, ಪ್ರಕಟನೆ 13:1-9, 14:8-11, 17:1-9 **14** ಧರ್ಮೋಪದೇಶಕಾಂಡ 4:29, 6:5, 10:12, 11:13, 13:3-4, 26:16, 30:6, ಯೆಹೋಶುವನು 22:5, ಮತ್ತಾಯ 22:37-40 **15** ವಿಮೋಚನಕಾಂಡ 18:21, 20:17, ಧರ್ಮೋಪದೇಶಕಾಂಡ 5:21, ಕೀರ್ತನೆಗಳು 10:3, ಮೀಕನು 2:1-3, ಮಾರ್ಕ 7:21-23, ರೋಮಾಪುರದವರಿಗೆ 1:28-32, 13:8-9, 1 ಕೊರಿಂಥದವರಿಗೆ 5:9-11, 6:9-10, ಎಫೆಸದವರಿಗೆ 5:1-5, ಕೊಲೊಸ್ಸೆಯವರಿಗೆ 3:5-6, 2 ತಿಮೊಥೆಯನಿಗೆ 3:1-5, 2 ಪೇತ್ರನು 2:1-3, 12-14, 1 ಯೋಹಾನನು 2:15-17 **16** ಯೆಶಾಯ 66:3-4, 2 ಥೆಸಲೋನಿಕದವರಿಗೆ 2:3-12

## ದಿವ್ಯ ದೇವದೂತರು ನಮ್ಮ ಗ್ರಹದ ಮೇಲೆ ಸುತ್ತುತ್ತಿದ್ದಾರೆ

*(ಪುಟ 3 ರಿಂದ ಮುಂದುವರಿದಿದೆ)*

ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[17] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬಿದ್ದೇನೆ.[18] ನನ್ನ ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕಾಗಿ ಆತ ಶಿಲುಬೆಯಲ್ಲಿ ಮರಣ ಹೊಂದಿದನು ಮತ್ತು ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬಿದ್ದೇನೆ.[19] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[20] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬಿದ್ದೇನೆ.[21] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[22] ಕಾಲ್ವಾರಿಯಲ್ಲಿ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿ.[23] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು, ಏಕೆಂದರೆ ನಿಮ್ಮ ಪದವಾದ ಬೈಬಲ್ ಹೀಗೆಂದು ಹೇಳುತ್ತದೆ.[24] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ಪದ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[25] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[26] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಮತ್ತು ಇನ್ನು ಮೇಲೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[27]

ಈಗ ನೀವು ರಕ್ಷಣೆ ಹೊಂದಿದ್ದರಿಂದ ನಿಮ್ಮ ಪೂರ್ಣ ಹೃದಯದಿಂದಲೂ, ಆತ್ಮದಿಂದಲೂ, ಮನಸ್ಸಿನಿಂದಲೂ ಮತ್ತು ಶಕ್ತಿಯಿಂದಲೂ ದೇವರಿಗೆ ಸೇವೆ ಮಾಡಿರಿ.[28] ರಕ್ಷಣೆಯ ನಂತರ, ಯೇಸುವು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ, ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ, ದೀಕ್ಷಾಸ್ನಾನ ಮಾಡಿದರು.[29] ಬೈಬಲ್ ಸೊಸೈಟಿ ಆಫ್ ಇಂಡಿಯಾದ 'ಸತ್ಯವೇದವು' [ಇಂಗ್ಲಿಷ್ ನ ಕೆಜೆವಿ] ಬೈಬಲ್ ಅನ್ನು ಓದಿ, ಮತ್ತು ನೀವು ಈ ಗ್ರಹವನ್ನು ಬಿಟ್ಟುಹೋಗುವ ತನಕ ಅದು ಹೇಳಿದ್ದನ್ನು ಮಾಡಿ.[30]

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ. ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ನಾವು ಪಾಸ್ಟರ್ ಅಲಾಮೊ ಅವರ ಸಾಹಿತ್ಯವನ್ನು ಅನೇಕ ಭಾಷೆಗಳಲ್ಲಿ ಮುದ್ರಿಸುತ್ತೇವೆ, ಮತ್ತು ಪ್ರಪಂಚದೆಲ್ಲೆಡೆ ಕಳುಹಿಸುತ್ತೇವೆ. ನಾವು ಮುದ್ರಣ ಕಾಗದ ಮತ್ತು ಶಿಪ್ಪಿಂಗಿಗಾಗಿ ಅನೇಕ ಮಿಲಿಯ ಡಾಲರುಗಳನ್ನು ವ್ಯಯಿಸುತ್ತೇವೆ, ಹಾಗಾಗಿ ನಮಗೆ ನಿಮ್ಮ ಪ್ರಾರ್ಥನೆ ಮತ್ತು ಆರ್ಥಿಕ ಸಹಾಯದ ಅಗತ್ಯವಿದೆ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ... ಯೇಸು ಆದೇಶಿಸುವಂತೆ, ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೇವೆ ಎಂದು ಕೇಳುತ್ತೀರೋ? ದಶಮಾಂಶ, ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಮಾಂಶವನ್ನು [ದಶಮಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವುದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**17** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **18** ಮತ್ತಾಯ 26:63-64, 27:54, ಲೂಕ 1:30-33, ಯೋಹಾನನು 9:35-37, ರೋಮಾಪುರದವರಿಗೆ 1:3-4 **19** ಅಪೋಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನನು 1:7, Rev. 5:9 **20** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನನು 2:19, 21, 10:17-18, 11:25, ಅಪೋಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **21** ಲೂಕ 22:69, ಅಪೋಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **22** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **23** ಎಫೆಸದವರಿಗೆ 2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನನು 1:7, ಪ್ರಕಟನೆ 1:5, 7:14 **24** ಮತ್ತಾಯ 26:28, ಅಪೋಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ1:7, ಕೊಲೊಸ್ಸೆಯವರಿಗೆ 1:14 **25** ಮತ್ತಾಯ 21:22, ಯೋಹಾನನು 6:35, 37-40, ರೋಮಾಪುರದವರಿಗೆ 10:13 **26** ಇಬ್ರಿಯರಿಗೆ 11:6 **27** ಯೋಹಾನನು 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **28** ಧರ್ಮೋಪದೇಶಕಾಂಡ 4:29, 6:5, 10:12, 11:13, 13:3-4, 26:16, 30:6, ಯೆಹೋಶುವನು 22:5, ಮತ್ತಾಯ 22:37-40, ಮಾರ್ಕ 12:29-31, ಲೂಕ 10:27 **29** ಮತ್ತಾಯ 28:18-20, ಯೋಹಾನನು 3:5, ಅಪೋಸ್ತಲರ ಕೃತ್ಯಗಳು 2:38, 19:3-5 **30** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವನು 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**
**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: (661) 252-5686 • Fax (661) 252-4362**
**www.alamoministries.com • info@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

ಆರಾಧನೆಗಳನ್ನು ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ರಾತ್ರಿ 8 ಗಂಟೆಗೆ ಮತ್ತು ಇತರ ತಾಣಗಳಲ್ಲಿ ಪ್ರತಿ ರಾತ್ರಿ ನಡೆಸಲಾಗುತ್ತದೆ.

ಮಾಹಿತಿಗಾಗಿ ದಯವಿಟ್ಟು (908) 937-5723 ಗೆ ಕರೆ ಮಾಡಿ. ಪ್ರತಿ ಆರಾಧನೆಯ ನಂತರ ಊಟೋಪಚಾರವಿರುತ್ತದೆ.

333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.

*ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯದ ವಿತರಕರಾಗುವ ಮೂಲಕ ಆತ್ಮಗಳ ಕೊಯ್ಲಿನಲ್ಲಿ ಶ್ರಮಜೀವಿಯಾಗಿರಿ.*

*ನಮ್ಮ ಎಲ್ಲಾ ಸಾಹಿತ್ಯ ಮತ್ತು ಆಡಿಯೊ ಸಂದೇಶಗಳು, ಷಿಪಿಂಗ್ ಸೇರಿದಂತೆ ಶುಲ್ಕರಹಿತವಾಗಿವೆ. ಅವುಗಳಿಗಾಗಿ ನಿಮ್ಮಿಂದ ಯಾರಾದರೂ ಶುಲ್ಕ ಪಡೆಯಲು ಪ್ರಯತ್ನಿಸುತ್ತಿದ್ದರೆ, ದಯವಿಟ್ಟು (661) 252-5686 ಗೆ ಕಲೆಕ್ಟ್ ಕರೆ ಮಾಡಿ.*

ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೋಸ್ತಲರ ಕೃತ್ಯಗಳು 4:12).

ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.

ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:

© Copyright March 2013 All rights reserved World Pastor Tony Alamo ®Registered March 2013

KANNADA—Vol. 17700—*Heavenly Angels Hovering Over Our Planet*